


ಸುದ್ದಿ ಸಂಚಯ




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಆಗಸ್ಟ್ ೨೪)

**ಹೊಸ ಶಾಖಾಕೇಂದ್ರಗಳು:** ಪಶ್ಚಿಮ ಬಂಗಾಳದ ಜಲಪಾಯ್‌ಗುಡಿ ಜಿಲ್ಲೆಯ **ಸಿಲಿಗುರಿಯಲ್ಲಿ** ಹೊಸ ಮಿಷನ್ ಕೇಂದ್ರವು ಆರಂಭವಾಗಿದೆ. ಝಾರ್‌ಗ್ರಾಮ ಕೇಂದ್ರದ ಉಪ-ಶಾಖೆಯ **ಶ್ರೀರಾಮಪುರದಲ್ಲಿ**ಆರಂಭವಾಗಿದೆ.

**ಶಾಖಾ ಕೇಂದ್ರಗಳ ಚಟುವಟಿಕೆಗಳು: ಭಾರತದಲ್ಲಿ :** **ನಾರಾಯಣಪುರ** ಆಶ್ರಮವು ಓರ್ಛಾ ಎಂಬಲ್ಲಿ ಹೊಸ ಸೇವಾ ಕೇಂದ್ರವೊಂದನ್ನು ಆರಂಭಿಸಿದೆ. **ಬಿಲಾಸ್‌ಪುರ್** ಕೇಂದ್ರದಲ್ಲಿ ಆಗಸ್ಟ್ ೧೧ ರಂದು ಪ್ರಧಾನ ಕಾರ್ಯದರ್ಶಿ ಸ್ವಾಮಿ ಸುವೀರಾನಂದಜಿಯವರು ಒಂದು ಆಸ್ಪತ್ರೆ ಹಾಗೂ ಶೈಕ್ಷಣಿಕ ಕೇಂದ್ರವನ್ನು ಉದ್ಘಾಟಿಸಿದರು. **ಕೊಯಂಬತ್ತೂರು ಮಿಷನ್** ಆಗಸ್ಟ್ ೧೪-೧೫ ರಂದು ವಿಶೇಷಚೇತನರ ರಾಜ್ಯಮಟ್ಟದ ವಿಶಿಷ್ಟ ಕ್ರೀಡಾಕೂಟವನ್ನು ನಡೆಸಿದೆ. **ಸರೀಷ** ಕೇಂದ್ರದಲ್ಲಿ ಜುಲೈ ೧೮ರಂದು ೫೦೦೦ ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವವನ್ನು ಆಚರಿಸಲಾಯಿತು. **ನರೇಂದ್ರಪುರ** ವಿದ್ಯಾಲಯದಲ್ಲಿ ಜುಲೈ ೨೬ರಂದು ಸ್ವಾಮಿ ಸುಹಿತಾನಂದಜಿಯವರು 'ಸ್ವಾಮಿ ಶಾರದೇಶ್ವರಾನಂದ ಪುರಾತತ್ತ್ವ ಸಂಗ್ರಹಾಲಯ'ವನ್ನು ಉದ್ಘಾಟಿಸಿದರು. **ಖೇತ್ರಿ** ಆಶ್ರಮದ ಪ್ರಾಥಮಿಕ ಶಾಲೆಯಲ್ಲಿ ಎರಡಂತಸ್ತಿನ ಹೆಚ್ಚುವರಿ ಕಟ್ಟಡವನ್ನು ಉದ್ಘಾಟಿಸಲಾಯಿತು.

**ವಿದೇಶಗಳಲ್ಲಿ :** ಫ್ರಾನ್ಸ್ ದೇಶದ **ಗ್ರೆಟ್ಜ್** ಕೇಂದ್ರವು ಆಗಸ್ಟ್ ೮ ರಿಂದ ೧೧ರ ವರೆಗೆ ವೇದಾಂತ ಸಮ್ಮೇಳನವನ್ನು ನಡೆಸಿದೆ. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಸ್ವಾಮಿ ಸುಹಿತಾನಂದಜಿ ಮಹಾರಾಜ್ ಭಾಗವಹಿಸಿ ಮಾತನಾಡಿದರು. ೧೧ ದೇಶಗಳಿಂದ ಬಂದ ಅನೇಕ ಭಾಷಣಕಾರರು ಇದರಲ್ಲಿ ಭಾಗವಹಿಸಿದ್ದರು. ಸುಮಾರು ೩೫೦ ಮಂದಿ ಭಕ್ತರು ಹಾಗೂ ಹಿತೈಷಿಗಳು ಪಾಲ್ಗೊಂಡಿದ್ದರು.

**ಫಿಜಿ** ಕೇಂದ್ರದ ಸ್ವಾಮಿ ವಿವೇಕಾನಂದ ಕಾಲೇಜು ತನ್ನ ೭೫ನೇ ವಾರ್ಷಿಕೋತ್ಸವವನ್ನು (೧೯೪೯-೨೦೨೪) ಆಗಸ್ಟ್ ೧೨ ರಿಂದ ೧೬ರ ವರೆಗೆ ಆಚರಿಸಿತು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕಾಲೇಜು ಮಟ್ಟದ ವಿಚಾರ ಸಂಕಿರಣಗಳು ನಡೆದವು. ದೇಶದ ಉಪ ಪ್ರಧಾನಿ ಪ್ರೊ. ಬಿಮನ್ ಪ್ರಸಾದ್ ಹಾಗೂ ಇನ್ನಿತರ ಗಣ್ಯರು ಪಾಲ್ಗೊಂಡಿದ್ದರು.

**ಮೌಲ್ಯಶಿಕ್ಷಣ ಕಾರ್ಯಕ್ರಮ ಹಾಗೂ ಯುವ ಸಮ್ಮೇಳನಗಳು:** ದಿಬ್ರೂಗಢ್, ಗುರುಗ್ರಾಮ, ರಾಜಮಹೇಂದ್ರವರಂ, ರಾಜ್‌ಕೋಟ್, ತಂಜಾವೂರು, ಯಾದಾದ್ರಿ-ಭುವನಗಿರಿ ಕೇಂದ್ರಗಳು ವಿವಿಧ ಪ್ರದೇಶಗಳಲ್ಲಿ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಿದವು. ಇಂದೋರ್, ಕಲ್ಯಾಣಿ, ತಿರುವನಂತಪುರ, ವಿಶಾಖಪಟ್ಟಣ, ವಿವೇಕನಗರ (ಅಗರ್ತಲಾ) ಕೇಂದ್ರಗಳಲ್ಲಿ ಯುವ ಸಮ್ಮೇಳನಗಳು ನಡೆದವು.

**ವಿದೇಶಗಳಲ್ಲಿ:** **ಬಟ್ಟಿಕಲೋವ** ಕೇಂದ್ರದಲ್ಲಿ ನಾಲ್ಕು ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು ಆಗಸ್ಟ್ ತಿಂಗಳಲ್ಲಿ ನಡೆದವು.

**ನೇತ್ರ ಚಿಕಿತ್ಸೆ ಶಿಬಿರ ಹಾಗೂ ವೈದ್ಯಕೀಯ ಶಿಬಿರಗಳು :** ಚೆನ್ನೈ ಮಠ, ಕೊಯಂಬತ್ತೂರು, ಕೊಂಟೈ, ಡಿಗ್‌ಬಾಯ್, ಜಮ್ಮು, ಖೇತ್ರಿ, ಲಕ್ನೋ, ಮದುರೈ, ಮಾನಸದ್ವೀಪ, ಮೇದಿನೀಪುರ, ನೌರಾ, ನಟ್ಟರಾಂಪಳ್ಳಿ, ಪೋರ್‌ಬಂದರ್, ರಹರಾ, ರಾಂಚಿ ಮೊರಾಬಾದಿ, ಸೇಲಂ, ಸಿಲ್‌ಚಾರ್, ತಂಜಾವೂರು ಹಾಗೂ ತಿರುಮಕೂಡಲ್ ಕೇಂದ್ರಗಳು ವೈದ್ಯಕೀಯ ಶಿಬಿರಗಳನ್ನು ನಡೆಸಿದವು.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020